ಮೇಲೆ ಮಾತ್ರವಲ್ಲ, ಇಡಿಯ ಭಾವನಾ ಜಗತ್ತಿನ ಮೇಲೆ ಅದು ತನ್ನ ಪ್ರಭಾವ ಬೀರುತ್ತಿದೆ. ಅದು ಯಾವುದೆಂದರೆ, ಉಪನಿಷತ್ತುಗಳ ಭಾವನೆ, ವೇದಾಂತದ ಪ್ರಭಾವ." ಸ್ವಾಮೀಜಿಯವರ ಪ್ರಕಾರ, ಉಪನಿಷತ್ತುಗಳು ದ್ವೈತ, ವಿಶಿಷ್ಟಾದ್ವೈತ ಮತ್ತು ಅದ್ವೈತ – ಈ ಮೂರೂ ಭಾವನೆಗಳನ್ನು ನೀಡುತ್ತವೆ. ಆದಾಗ್ಯೂ, ಅವುಗಳಲ್ಲಿ ಸಾಮರಸ್ಯವನ್ನು ಉಂಟುಮಾಡುವ ವಿವರಣೆಯನ್ನು ನೀಡುವುದು ಅತ್ಯವಶ್ಯಕ. ಇದನ್ನು ಇಡೀ ಜಗತ್ತಿಗೆ ತಿಳಿಸಬೇಕು. ಇದು ಭರತ ಖಂಡಕ್ಕೆ ಎಷ್ಟು ಅವಶ್ಯಕವೋ, ಹೊರಗಿನ ಜಗತ್ತಿಗೂ ಅಷ್ಟೇ ಅವಶ್ಯಕ.

**ವೇದಾಂತ ಸಂಪ್ರದಾಯಗಳ ಸಮನ್ವಯ:** "ಶ್ರೀರಾಮಕೃಷ್ಣರ ಇಡೀ ಜೀವನ ಉಪನಿಷತ್ತುಗಳ ಮಹಾಸಮನ್ವಯದ ಹಾಗೆ ಇತ್ತು. ಉಪದೇಶಕ್ಕಿಂತ ಸಾವಿರಪಾಲು ಹೆಚ್ಚಾಗಿ ಅವರ ಜೀವನವು ಉಪನಿಷತ್ತುಗಳ ಜೀವಂತಭಾಷ್ಯದಂತೆ ಇತ್ತು" ಎಂದು ಸ್ವಾಮೀಜಿ ತುಂಬು ಹೃದಯದಿಂದ ಹೇಳುತ್ತಾರೆ. ಈ ಸಮನ್ವಯದ ಭಾವನೆಯನ್ನು ವಿವರಿಸುತ್ತ, ವೇದಾಂತದ ಸಂಪ್ರದಾಯಗಳು ಪರಸ್ಪರ ವಿರುದ್ಧವಲ್ಲ, ಒಂದು ಮತ್ತೊಂದಕ್ಕೆ ಪೂರಕ, ಒಂದು ಮತ್ತೊಂದರ ಪೂರೈಕೆ ಎಂದು ಅವರು ವಿವರಿಸುತ್ತಾರೆ. ಹಾಗೆಯೇ " 'ತತ್ತ್ವಮಸಿ' ಎಂಬ ಅದ್ವೈತ ಶಿಖರವನ್ನು ಮುಟ್ಟುವವರೆಗೆ, ಒಂದು ಮತ್ತೊಂದಕ್ಕೆ ಒಯ್ಯುವ ಮೆಟ್ಟಲು ಎಂದು ತೋರುವುದೇ ನನ್ನ ಜೀವನದ ಗುರಿ" ಎಂದೂ ಅವರು ಘೋಷಿಸುತ್ತಾರೆ. ಹಾಗೆಯೇ ಹಿಂದೂಗಳೆಲ್ಲ – ದ್ವೈತಿ, ಅದ್ವೈತಿ, ವಿಶಿಷ್ಟಾದ್ವೈತಿ – ಎಲ್ಲರೂ ವೇದಾಂತಿಗಳೇ ಎಂದು ಅವರು ಒತ್ತಿ ಹೇಳುತ್ತಾರೆ.

**ವೇದಾಂತದ ಪ್ರಮಾಣಗ್ರಂಥಗಳು:** ಭರತಖಂಡದ ಸಂಪ್ರದಾಯಗಳೆಲ್ಲ ವ್ಯಾಸಸೂತ್ರಗಳನ್ನು ಅತಿಶ್ರೇಷ್ಠ ಪ್ರಮಾಣವೆಂದು ಒಪ್ಪಿಕೊಳ್ಳುವುವು. ವ್ಯಾಸರು ಈ ಸೂತ್ರಗಳನ್ನು ಬರೆದದ್ದು ವೇದಾಂತ ಶಾಸ್ತ್ರದ ಪುಷ್ಪಗಳನ್ನೆಲ್ಲ ಒಂದು ಸೂತ್ರದಲ್ಲಿ ಬಂಧಿಸುವುದಕ್ಕಾಗಿ. ವ್ಯಾಸಸೂತ್ರದ ಅನಂತರದ ಪ್ರಮಾಣವೆಂದರೆ ಭಗವದ್ಗೀತೆ. ಶ್ರೀಶಂಕರಾಚಾರ್ಯರು ಇದನ್ನು ಪ್ರಚಾರ ಮಾಡಿದರು. ಇವೆರಡೂ ಪ್ರಮಾಣಗಳಿಗೆ ಆಧಾರವಾದುವು ಉಪನಿಷತ್ತುಗಳು. ಇವು ಒಂದು ಜ್ಞಾನಸಾಗರ. ಇವನ್ನು ಓದುವಾಗ ಕಾವ್ಯದ ಅಪೂರ್ವ ಭವ್ಯತೆಯ ಅನುಭವ ಆಗುತ್ತದೆ.

**ಉಪನಿಷತ್ತುಗಳ ತತ್ತ್ವ:** ಜೀವನಕ್ಕೆ ಮತ್ತು ಜಗತ್ತಿಗೆ ಕಾರಣವಾದ ಪರಮಾತ್ಮ ತತ್ತ್ವಕ್ಕೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರವನ್ನು ಬಾಹ್ಯ ಪ್ರಕೃತಿಯಲ್ಲಿ ಕಂಡುಹಿಡಿಯಲು ಸಾಧ್ಯವಿಲ್ಲ ಎಂಬುದನ್ನು ಉಪನಿಷತ್ತಿನ ಋಷಿಗಳು ಹೇಳುತ್ತಾರೆ. ಜಡ ಅಚೇತನ ಪ್ರಕೃತಿ ಸತ್ಯವನ್ನು ಕೊಡಲಾರದು ಎಂದು ಅವರು ಅದನ್ನು ತ್ಯಜಿಸಿ, ಜ್ಯೋತಿರ್ಮಯ ಜೀವಾತ್ಮನ ಕಡೆಗೆ ತಮ್ಮ ಗಮನವನ್ನು ಹರಿಸಿದರು. ಅಲ್ಲಿ ಅವರಿಗೆ ತಮ್ಮ ಸಮಸ್ಯೆಗಳಿಗೆ ಉತ್ತರ ಸಿಕ್ಕಿತು.

ಉಪನಿಷತ್ತುಗಳು ಎಂದರೆ ಆತ್ಮತತ್ತ್ವದ ವರ್ಣನೆಯಲ್ಲಿ ತೊಡಗಿರುವ ಜಗತ್ತಿನ ಅತಿ ಶ್ರೇಷ್ಠ ಕಾವ್ಯವೇ ಸರಿ. ಉಪನಿಷತ್ತುಗಳ ಬೋಧನೆಯಲ್ಲಿ ನಾವು ಗಮನದಲ್ಲಿಡಬೇಕಾದ ಇನ್ನೊಂದು ಅಂಶವೆಂದರೆ, ಅಪೌರುಷೇಯತ್ವ. ಸ್ವಾಮೀಜಿಯವರ ಪ್ರಕಾರ, ಉಪನಿಷತ್ತಿನ ಅಪೌರುಷೇಯ ಭಾವನೆಯು ಅವು ಸಾರುವ ದೇವರಷ್ಟೇ ಅದ್ಭುತವಾದುದು. ಉಪನಿಷತ್ತುಗಳ ಅಪೂರ್ವ ಮಹಿಮೆ, ಜ್ಯೋತಿರ್ಮಯವೂ, ತೇಜೋಮಯವೂ ಆದ ಮಂತ್ರಗಳ ಶಕ್ತಿಯಲ್ಲಿದೆಯೇ ಹೊರತು, ವ್ಯಕ್ತಿ ವಿಶೇಷದಲ್ಲಿ ಇಲ್ಲ.

**ಉಪನಿಷತ್ತುಗಳಲ್ಲಿ ಕಂಡುಬರುವ ಸಾಮಾನ್ಯ ಭಾವನೆಗಳು:** ಎಲ್ಲ ಸಂಪ್ರದಾಯದವರೂ ಒಪ್ಪಿಕೊಳ್ಳುವ ಕೆಲವು ಸಿದ್ಧಾಂತಗಳನ್ನು ಉಪನಿಷತ್ತುಗಳಲ್ಲಿ ಕಾಣುತ್ತೇವೆ. ಅವುಗಳಲ್ಲಿ ಮೊದಲನೆಯದು, ಸಂಸಾರ ಅಥವಾ ಜೀವಿಯ ಪುನರ್ಜನ್ಮ. ಎರಡನೆಯದು ಉಪನಿಷತ್ತುಗಳಲ್ಲಿ ಕಂಡುಬರುವ ಮನಶ್ಶಾಸ್ತ್ರ. ಎಲ್ಲರೂ ಒಪ್ಪಿಕೊಳ್ಳುವ ಇನ್ನೊಂದು ಭಾವನೆಯೆಂದರೆ ಸಗುಣ ದೇವರು. ಅವನನ್ನು ಈಶ್ವರ ಎನ್ನುವರು. ಅದ್ವೈತಿಗಳು ಇದಕ್ಕೂ ಮುಂದೆ ಹೋಗಿ, ನಿರ್ಗುಣ ದೇವರನ್ನು ನಂಬುತ್ತಾರೆ. ಉಪನಿಷತ್ತುಗಳ ಆಧಾರದ ಮೇಲೆಯೇ ದ್ವೈತಿಗಳು, ಅದ್ವೈತಿಗಳು ಮತ್ತು ವಿಶಿಷ್ಟಾದ್ವೈತಿಗಳು ತಮ್ಮ ಸಿದ್ಧಾಂತಗಳನ್ನು ರೂಪಿಸಿರುವರು.

**ತ್ಯಾಗವೇ ಭಾರತದ ಪತಾಕೆ :** ಭಾರತದಲ್ಲಿ ಕಂಡುಬರುವ ಎಲ್ಲ ಸಂಪ್ರದಾಯಗಳೂ ಒಪ್ಪುವ ಸಮಾನ ಸಿದ್ಧಾಂತವೆಂದರೆ 'ತ್ಯಾಗ'ದಿಂದ ಮಾತ್ರವೇ ಅಮೃತತ್ವವನ್ನು ಪಡೆಯಬಹುದು ಎಂಬುದು. ಧರ್ಮ ಪ್ರಾರಂಭವಾಗುವುದೇ ತ್ಯಾಗದಿಂದ. ನಾಶವಾಗುತ್ತಿರುವ ಜನಾಂಗಗಳಿಗೆ, ಎಲ್ಲಾ ದುರಾಚಾರಿಗಳಿಗೆ ಮತ್ತು ದೌರ್ಜನ್ಯಪರರಿಗೆ ಸನಾತನ ಭಾರತವು 'ತ್ಯಾಗ' ವೆಂಬ ಸಂದೇಶದಿಂದ ಎಚ್ಚರಿಕೆ ನೀಡುತ್ತಿದೆ. "ಹಿಂದೂಗಳೇ, ಈ ಪತಾಕೆಯನ್ನು ಎಂದಿಗೂ ತ್ಯಜಿಸಬೇಡಿ" ಎಂದು ಸ್ವಾಮಿ ವಿವೇಕಾನಂದರು ತಮ್ಮ ದೇಶ ಬಾಂಧವರಿಗೆ ಕರೆ ನೀಡುವರು. ಅವರು ಹೇಳುವ ಪ್ರಕಾರ, ಪುರಾತನ ಕಾಲದಲ್ಲಿ ತ್ಯಾಗವೇ ಗೆದ್ದಿತ್ತು. ಈಗ ಮತ್ತೆ ಅದು ಭಾರತವನ್ನು ಗೆಲ್ಲಬೇಕಾಗಿದೆ. ಈಗಲೂ ಭಾರತದಲ್ಲಿ ತ್ಯಾಗವೇ ಅತ್ಯುತ್ತಮ ಮತ್ತು ಪರಮಶ್ರೇಷ್ಠ ಆದರ್ಶವಾಗಿದೆ.

**ಧರ್ಮವೆಂಬುದು ಸಾಕ್ಷಾತ್ಕಾರದ ವಿಷಯ :** ಇದರೊಂದಿಗೆ ಎಲ್ಲ ಪಂಥಗಳಲ್ಲಿಯೂ ರೂಢಿಯಿರುವ ಇನ್ನೊಂದು ಭಾವನೆಯನ್ನು ಸ್ವಾಮೀಜಿ ನಮ್ಮ ಮುಂದಿಡುತ್ತಾರೆ. ಅದೇ, ಧರ್ಮವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕು ಎಂಬ ಅಪೂರ್ವ ಭಾವನೆ. ಇದು ನಮ್ಮ ದೇಶದಲ್ಲಿ ಮಾತ್ರವೇ ಇರುವುದು ಎಂದು ಸ್ವಾಮೀಜಿ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. "ಸತ್ಯವನ್ನು ಸ್ವತಃ ಸಾಕ್ಷಾತ್ಕಾರ ಮಾಡಿಕೊಳ್ಳಬೇಕು. ಅದು ಗುರುವಿನಿಂದ ಶಿಷ್ಯನಿಗೆ ಬರುವುದು. ಈ ಅಂತರ್ದೃಷ್ಟಿ ಶಿಷ್ಯನಿಗೆ ಬಂದಾಗ, ಆತಂಕಗಳೆಲ್ಲ ದೂರವಾಗಿ ಆತ್ಮಸಾಕ್ಷಾತ್ಕಾರ ಸಿದ್ಧಿಸುವುದು" ಎಂದು ಅವರು ಹೇಳುತ್ತಾರೆ.

**ವಿಭಿನ್ನ ಸಂಪ್ರದಾಯಗಳ ಸಮನ್ವಯ ಕ್ಷೇತ್ರ :** ಭಾರತಕ್ಕೆ ಇಂದು ಬೇಕಾಗಿರುವುದು ವಿವಿಧ ಮತಗಳ ನಡುವಣ ವಾದವಿವಾದವಲ್ಲ. ನಮ್ಮ ರಾಷ್ಟ್ರೀಯ ಸಮಸ್ಯೆಗಳನ್ನು ಪರಿಹರಿಸುವ ಉಪಾಯವೆಂದರೆ, **ಏಕಂ ಸತ್ ವಿಪ್ರಾ ಬಹುಧಾ ವದಂತಿ** – "ಸತ್ಯ ಒಂದೇ, ತಿಳಿದವರು ಅದನ್ನು ಬೇರೆಬೇರೆ ಹೆಸರುಗಳಿಂದ ಕರೆಯುತ್ತಾರೆ" ಎನ್ನುವ ವೇದೋಕ್ತ ಉದಾರ ಭಾವನೆಯನ್ನು ಅನುಷ್ಠಾನಕ್ಕೆ ತರುವುದು. ಇದನ್ನು ಮಾಡಲೆಂದೇ ಒಬ್ಬ ಮಹಾಪುರುಷರು ಉದಯಿಸಿದರು. "ಅವರ ಜೀವನವೇ ಭರತಖಂಡದ ವಿಭಿನ್ನ ಸಂಪ್ರದಾಯಗಳ ಸಮನ್ವಯ ಕ್ಷೇತ್ರವಾಗಿತ್ತು. ಅವರೇ ಶ್ರೀರಾಮಕೃಷ್ಣ ಪರಮಹಂಸರು. ದ್ವೈತ ಅದ್ವೈತಗಳೆರಡೂ ಅವಶ್ಯಕ ಎಂಬುದನ್ನು ಅವರ ಜೀವನವು ತೋರಿಸುತ್ತದೆ."